ಶಿಕ್ಷಣವನ್ನು ಕೊಡುತ್ತಾರೆ?' ನನ್ನ ಕಹಿಮಾತಿನಿಂದ ನೀನಾ ಕೆಂಡಾಮಂಡಲವಾದಳು.

ನನಗೆ ಈಗಲೂ ಅವಳ ಆ ಮುಖ ನೆನಪಾಗುತ್ತದೆ. ಆಗ ಅವಳ ಮುಖ ಅದೆಷ್ಟು ವಿಕೃತವಾಗಿತ್ತು! ಅಂದಿನ ದಿನದ ನಂತರ ಅವಳು ಮನೆಯಲ್ಲಿ ಎಲ್ಲರೆದುರು ಸಿಗರೇಟ್ ಸೇದುವುದನ್ನು ನಿಲ್ಲಿಸಿದ್ದಳು, ಆದರೆ ಕದ್ದು ಮುಚ್ಚಿ ಸೇದುತ್ತಿದ್ದಳು. ಅವಳ ಬಾಯಿಯಿಂದ ಸಿಗರೇಟಿನ ವಾಸನೆ ಬರುವುದು ಇನ್ನೂ ನಿಂತಿರಲಿಲ್ಲ. ಅದೊಂದು ದಿನ ಅವಳು ತುಂಬಾ ಹೊತ್ತು ಮನೆಯಲ್ಲಿ ಕಾಣ ಬರದಿದ್ದಾಗ, ನಾನು ಹೊರಗಿನ ಲಾನ್‌ಗೆ ಹೋದೆ.

ಅವಳು ತನ್ನ ತೋಟದಲ್ಲಿ ಕುತ್ಸುರಾ ಮರದ ಕೆಳಗೆ ಆರಾಮಾಗಿ ಕೂತು, ಸಿಗರೇಟ್ ಸೇದುತ್ತಿದ್ದಳು. ಈ ಹಾರ್ಡ್‌ವುಡ್ ಮರ ಅವಳ ತೋಟದ ಅತ್ಯಂತ ಪ್ರೀತಿಯ ಮರವಾಗಿತ್ತು. ಅವಳು ಈ ಮನೆಯನ್ನು ಖರೀದಿಸಲು ಬಂದಾಗ, ಆ ಮರದಿಂದಾಗಿ ಈ ಮನೆಯನ್ನು ಇಷ್ಟಪಟ್ಟಿದ್ದಳು. ಹಿಂದಿನ ಮನೆಯ ಮಾಲೀಕ ಅವಳಿಗೆ ಮನೆಯನ್ನು ತೋರಿಸುವಾಗ, 'ಇದರ ಮೂಲ ಜಪಾನ್, ಇದು ಚಳಿ ಪ್ರದೇಶ ಅಥವಾ ಶೀತೋಷ್ಣದ ಪ್ರದೇಶ ಅಥವಾ ಯಾವುದೇ ವಾಯುಗುಣದಲ್ಲಿ ಬೆಳೆಯಬಲ್ಲದು, ಕುತ್ಸುರಾ ಎಂಬುದು ಸಹ ಜಪಾನ್ ಹೆಸರು' ಎಂದು ಮರದ ಮಹತ್ವವನ್ನು ಹೇಳಿದ್ದ.

ಅವಳ ತೋಟದಲ್ಲಿ ನಾಲ್ಕೈದು ಮರಗಳನ್ನು ನೆಡಲಾಗಿತ್ತು, ಆದರೆ ಈ ಕುತ್ಸುರಾ ಮರವನ್ನು ಸ್ವಲ್ಪ ದೂರದಲ್ಲಿ ನೆಡಲಾಗಿತ್ತು. ಕತ್ಸುರಾ ಮರ ಒಂಟಿಯಾಗಿ ನಿಂತು ಆಕಾಶವನ್ನು ಸ್ಪರ್ಶಿಸುವಂತೆ ತೋರುತ್ತಿತ್ತು. ನೀನಾ ಮರವನ್ನು ತಬ್ಬಿಕೊಂಡು ಅದನ್ನು ರಕ್ಷಿಸುತ್ತಿದ್ದಳು, ಅದರ ಬೇರುಗಳ ಮೇಲೆ ಕೂತು ವಿಶ್ರಾಂತಿ ಪಡೆಯುತ್ತಿದ್ದಳು. ನಾನು ಮರವನ್ನು ಇಷ್ಟು ಪ್ರೀತಿಸುವ ವ್ಯಕ್ತಿಯನ್ನು ಎಂದೂ ನೋಡಿರಲಿಲ್ಲ.

'ನೀನಾ...' ಅವಳನ್ನು ಕರೆದೆ, 'ಇಷ್ಟು ರಾತ್ರಿಯಲ್ಲಿ ಇಲ್ಲಿ ಕೂತು ಏನು ಮಾಡುತ್ತಿದ್ದೀಯ?'

ನನ್ನನ್ನು ನೋಡಿದೊಡನೆಯೇ ಅವಳು ಕೂಡಲೇ ತನ್ನ ಸಿಗರೇಟನ್ನು ನೆಲಕ್ಕೆ ಹೊಸಕಿ, ಎದ್ದು ನಿಂತಳು.

'ಏನಿಲ್ಲ, ಸುಮ್ಮನೆ ತಣ್ಣನೆಯ ಗಾಳಿಗೆ...'

'ಓಹೋ... ತಣ್ಣನೆಯ ಗಾಳಿಯಲ್ಲಿ ಬಿಸಿ ಸಿಗರೇಟಿನ ಸ್ವಾದವನ್ನು ಅನುಭವಿಸುತ್ತಿದ್ದೀಯ' ನಾನು ವ್ಯಂಗ್ಯವಾಡಿದೆ. ಅವಳ ಮುಖದಲ್ಲಿ ಅಪರಾಧಿ ಭಾವನೆ ಮೂಡಿತು.

'ಈ ವಿಷದ ಹೊಗೆಯನ್ನು ನುಂಗಿ ನಿನ್ನ ಆಯುಸ್ಸನ್ನೇಕೆ ಕಡಿಮೆ ಮಾಡಿಕೊಳ್ಳುತ್ತಿದ್ದೀಯ?'

'ಹೆಚ್ಚು ಬದುಕಿ ಏನು ಮಾಡಬೇಕಿದೆ?' ಅವಳು ಮೆಲ್ಲನೆ ಉಸುರಿದಳು.

'ನಿನ್ನ ಸೊಕ್ಕಿನ ತಂದೆ ತಾಯಿಗೆ ಈ ಮಾತು ಹೇಳು. ನಿನ್ನ ಬೆಡಗಿನ ಪುತ್ರಿಯರಿಗೆ ಈ ಮಾತು ಹೇಳು. ನಾನು ಹೆಚ್ಚು ದಿನ ಬದುಕಬೇಕಿಲ್ಲ ಅಂತ...' ನನಗೆ ಅತೀವ ಸಿಟ್ಟು ಬಂತು.

ಜೀವನ ಎಂದರೇನು! ಮನುಷ್ಯನಿಗೆ ಜೀವನದಿಂದ ಸಾವಿರಾರು ಅಪೇಕ್ಷೆಗಳು, ಆಸೆಗಳು ಇರುತ್ತವೆ. ಜೀವನದ ಸಂಘರ್ಷಗಳು ಅಸಂತೋಷದ ವಾತಾವರಣವನ್ನು ನಿರ್ಮಿಸಿವೆ; ಇಂದಿನ ಬಹುತೇಕ ಜನ ನಿರಾಸೆ ಮತ್ತು ನಿರರ್ಥಕತೆಯಲ್ಲಿ ಬದುಕುತ್ತಿದ್ದಾರೆ. ಎಲ್ಲರೊಳಗೆ ಒಂದು ವಿಚಿತ್ರ ಚಡಪಡಿಕೆಯಿದೆ. ನಿರಾಸೆ ಮತ್ತು ಅಶ್ರದ್ಧೆಯ ಅಂಧಕಾರದ ವಾತಾವರಣದಲ್ಲಿ ನಾನು ಆಸ್ಥೆ ಮತ್ತು ಶ್ರದ್ಧೆಯ ದಾರ ಹಿಡಿದು ಜೀವನದಲ್ಲಿ ಸ್ನೇಹ, ಆಸೆ, ಶಾಂತಿ, ಸಹಾನುಭೂತಿ ಮತ್ತು ಆನಂದದ ಕೊಳಲನ್ನು ಬಾರಿಸುತ್ತಾ ದೇವಸ್ಥಾನದ ತೀರ್ಥಯಾತ್ರೆಗೆ ಹೊರಟಿದ್ದೇನೆ. ಇಂದು ನಾನು ಜೀವನ ಸಂಘರ್ಷದಲ್ಲಿ ಗೆಲುವನ್ನು ಪಡೆಯುವ ಮಾರ್ಗವೊಂದನ್ನು ನಿರ್ಧರಿಸಲು ಬಯಸುತ್ತೇನೆ. ಹೆಲೂಲುಯಿಯಾ!

## ಜವಾಬ್ದಾರಿಯಿಲ್ಲದ ಮಾಜಿ ಪತಿ

ಒಂದು ವೇಳೆ ನೀವು ಮದುವೆಯಾದ ಮಹಿಳೆಯನ್ನು ಮದುವೆಯಾದರೆ ಹಾಗೂ ಮಾಜಿ ಪತಿಯಿಂದ ಅವಳಿಗೆ ಮಕ್ಕಳೂ ಇದ್ದರೆ, ಹೆಂಡತಿಯ ಮಾಜಿ ಪತಿ ನಿಮ್ಮ ಜೀವನದಲ್ಲಿ ಅವಶ್ಯವಾಗಿ ಮೂಗು ತೂರಿಸುತ್ತಾನೆ. ಓಲಿವರ್ ತನ್ನ ಎರಡನೆಯ ಪರಿವಾರವನ್ನು ನಿರ್ವಹಿಸುತ್ತಿದ್ದಾಗ್ಯೂ, ಅವನಿಗೆ ತನ್ನ ಹಿಂದಿನ ಪರಿವಾರದೊಂದಿಗೆ ಯಾವುದೇ ವಿಶೇಷ ಸಂಬಂಧ ಉಳಿದಿರಲಿಲ್ಲ; ಆದರೂ ಅವನಿಗೆ ಪರಿವಾರದಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಹೇಳಲು ಸಾಧ್ಯವಿರಲಿಲ್ಲ.

ನಾನು ಓಲಿವರನ ಬಗ್ಗೆ ಮೊದಲೇ ಸಾಕಷ್ಟು ಕೇಳಿದ್ದೆ. ಅವನನ್ನು ಪ್ರತ್ಯಕ್ಷವಾಗಿ ಮೊದಲ ಬಾರಿಗೆ ಕರೀನಾಳ ಹದಿನೆಂಟನೆಯ ಹುಟ್ಟಿದ ಹಬ್ಬದಂದು ಭೇಟಿಯಾಗಿದ್ದೆ. ಅವನು ನಲ್ವತ್ತರ ವಯಸ್ಸನ್ನು ದಾಟಿದ್ದ. ಅವನು ಯೌವನದಲ್ಲಿ ಹೇಗಿದ್ದಿರಬಹುದೆಂದು ನಾನು ಊಹಿಸುತ್ತಿದ್ದೆ. ಓಲಿವರ್ ತನ್ನ ಮೊದಲ ಪ್ರೇಮಿಯಾಗಿದ್ದ ಎಂದು ನೀನಾ ನನಗೆ ಹೇಳಿದ್ದಳು. ಈಗ ಅವನ ತಲೆಯ ಕೂದಲುಗಳು ಉದುರುತ್ತಿದ್ದವು, ಅವನಿಗೆ ಬೊಜ್ಜು ಬಂದಿತ್ತು. ಅವನು ತುಂಬಾ ಬಿಳಿಯಾಗಿದ್ದು, ಒಂದು ಬಿಳಿ ಗೋಡೆಯ ಮುಂದೆ ನಿಂತರೆ ಗೋಡೆಯ ಬಣ್ಣ ಮತ್ತು ಅವನ ಬಣ್ಣ ಒಂದೇ ತೆರನಾಗಿ ಕಾಣಿಸುತ್ತಿತ್ತು. ಅವನನ್ನು ನೋಡಿದಾಗ, ನೀನು ಮೈದಾ ಹಿಟ್ಟಿನ ಬ್ರೆಡ್ಡನ್ನೇ ಸದಾ ತಿನ್ನುತ್ತೀಯ, ಹಣ್ಣುಹಂಪಲು–ತರಕಾರಿಗಳನ್ನು ತಿನ್ನುವುದಿಲ್ಲವೇ ಎಂದು ಕೇಳಲು ಮನಸ್ಸಾಗುತ್ತಿತ್ತು. ನೀನಾ ದಟ್ಟ ಶ್ಯಾಮಲ ವರ್ಣವನ್ನು ಹೊಂದಿದ್ದಳು. ಒಬ್ಬ ಯೂರೋಪಿಯನ್ ಮತ್ತು ಇಂಡಿಯನ್ನಿನ ಚರ್ಮದ ಬಣ್ಣದಲ್ಲಿ ಸ್ಪಷ್ಟವಾದ ಭಿನ್ನತೆ ಇರುತ್ತದೆ, ಆದರೆ ಓಲಿವರ್ ಮತ್ತು ನೀನಾಳ ಮೈಬಣ್ಣದಲ್ಲಿ ತುಂಬಾ ವಿರೋಧವಿತ್ತು. ಇಬ್ಬರು ಹೇಗೆ ಪರಸ್ಪರ ಆಕರ್ಷಿತರಾದರು?

ಅವನು ಸಹ ನೀನಾಳಂತೆ ಕ್ಯಾಂಬ್ರಿಜ್‌ಗೆ ಸೇರಿದ್ದ. ಹೀಗಾಗಿ ಪ್ರತಿಭಾಶಾಲಿಯೇ ಇರಬೇಕು. ಆದರೆ ಅವನು ನನಗೆ ಉತ್ಸಾಹಿ ಮತ್ತು ಚಟುವಟಿಕೆಯುಳ್ಳ ವ್ಯಕ್ತಿಯಾಗಿ ಕಾಣದೆ ಕುರೂಪಿ ಮತ್ತು ದಢೂತಿ ವ್ಯಕ್ತಿಯಾಗಿ ಕಾಣಬರುತ್ತಿದ್ದ. ಬಹುಶಃ ಯೌವನದಲ್ಲಿ ಸುಂದರನಾಗಿರಬೇಕು, ಆಗ ಅವನ ಶರೀರದಲ್ಲಿ ಸ್ವಲ್ಪಮಟ್ಟಿನ ಉತ್ಸಾಹವಿತ್ತೇನೋ. ಆಗ ನೀನಾಗೆ ಇವನು ಆಕರ್ಷಕವಾಗಿ ಕಂಡಿದ್ದನೇನೋ.

ತನ್ನ ಮಗಳು ಕರೀನಾಳ ಹುಟ್ಟುಹಬ್ಬದ ಆಚರಣೆಗಾಗಿ ನೀನಾ ಒಂದು ದೊಡ್ಡ ಪಾರ್ಟಿ ಹಾಲ್ ಬುಕ್ ಮಾಡಿಸಿದ್ದಳು. ಅಂದು ಅವಳು ಭಾವುಕಳಾಗಿ ನನಗೆ ಹೇಳಿದ್ದಳು, 'ಮಕ್ಕಳು ವಯಸ್ಸಿಗೆ ಬಂದಾಗ ಮಕ್ಕಳ ಜೀವನದಿಂದ ತಂದೆ–ತಾಯಿಯ ಪ್ರಭುತ್ವ ದೂರವಾಗುತ್ತದೆ. ಕಾನೂನಿನ ಪ್ರಕಾರ ಅವರು ಪರಿಪಕ್ವವಾಗಿ ಸ್ವತಂತ್ರರಾಗುತ್ತಾರೆ. ಅವರಿಗೆ ಅವರ ದಸ್ತಾವೇಜುಗಳಿಗೆ ತಂದೆ–ತಾಯಿಯ ರುಜುವಿನ ಅವಶ್ಯಕತೆಯಾಗುವುದಿಲ್ಲ. ಅವರು ವಯಸ್ಕರಾಗುವುದರಿಂದ ತಮ್ಮ ಜೀವನದ ಮುಖ್ಯ ತೀರ್ಮಾನವನ್ನು ಕೈಗೊಳ್ಳಲು ತಂದೆ ತಾಯಿಯ ಅನುಮತಿ ಬೇಕಾಗಿಲ್ಲ. ಹೀಗಾಗಿ ಡೆನಿಶ್ ಸಮಾಜದಲ್ಲಿ ತಂದೆ ತಾಯಿ ತಮ್ಮ ಮಕ್ಕಳ ಹದಿನೆಂಟನೆಯ ಹುಟ್ಟಿದ ಹಬ್ಬವನ್ನು ತುಂಬಾ ಉತ್ಸಾಹ ಮತ್ತು ವಿಜೃಂಭಣೆಯಿಂದ ಆಚರಿಸುತ್ತಾರೆ; ನಾವು ನಿನ್ನನ್ನು ಪಾಲನೆ ಪೋಷಣೆ ಮಾಡಿದೆವು, ಈಗ ನೀನು ಮುಂದಕ್ಕೆ ಬೆಳೆಯಲು ಸ್ವತಂತ್ರ ಎಂದು ಸಹ ಹರಸುತ್ತೇವೆ'.

ಸಮಾರಂಭದಲ್ಲಿ ಕರೀನಾಳ ಶಾಲೆಯ ಇಡೀ ತರಗತಿ, ನೀನಾ ಮತ್ತು ಅವಳ ತಂದೆ ತಾಯಿಯ ಡೆನಿಶ್ ಮತ್ತು ಇಂಡಿಯನ್ ಗೆಳೆಯರು ಎಲ್ಲಾ ಸೇರಿ ಎಂಬತ್ತು ತೊಂಬತ್ತು ಜನರಿದ್ದರು. ನೀನಾಳಿಗೆ ತನ್ನ ತಂದೆ ತಾಯಿಯ ಆರ್ಥಿಕ, ಶಾರೀರಿಕ ಮತ್ತು ಭಾವನಾತ್ಮಕವಾಗಿ ಸಂಪೂರ್ಣ ಸಹಕಾರವಿತ್ತು. ನೀನಾಳ ಜೀವನ ಏನು ಗಳಿಸಿದೆಯೋ, ಅವೆಲ್ಲವೂ ಅವಳ ತಂದೆ ತಾಯಿಯಿಂದಾಗಿ ಎಂದು ನನಗೆ ಅನ್ನಿಸುತ್ತಿತ್ತು.

ನಾನು ಕರೀನಾಳ ಮಲತಂದೆಯಾಗಿದ್ದು, ನಾನೂ ಸಹ ಸಮಾರಂಭದಲ್ಲಿ ನನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೆ. ಕೇಕ್‌ಗೆ ಆರ್ಡರ್, ಹಾಲ್ ಬುಕಿಂಗ್, ಹಾಲ್‌ನ ಡೆಕೊರೇಷನ್, ಕೇಟರಿಂಗ್ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವಲ್ಲಿ ನೀನಾಳಿಗೆ ಮನಸಾರೆ ಸಹಾಯ ಮಾಡುತ್ತಿದ್ದೆ. ಇದರೊಂದಿಗೆ ನೀನಾ ನನಗೆ ಒಂದು ವಿಡಿಯೊ ಚಿತ್ರವನ್ನು ಮಾಡುವ ಜವಾಬ್ದಾರಿಯನ್ನು ಸಹ ವಹಿಸಿದಳು. ಕರೀನಾಳ ಹುಟ್ಟಿನಿಂದ ಹಿಡಿದು ಅವಳ ಹದಿನೆಂಟನೆಯ ವರ್ಷದವರೆಗಿನ ಭಾವಚಿತ್ರಗಳನ್ನು ಕಲೆ ಹಾಕಿ ಒಂದು ಫಿಲ್ಮ್ ತಯಾರಿಸಿ ಅದನ್ನು ಅತಿಥಿಗಳಿಗೆ ಪ್ರೊಜೆಕ್ಟರ್‌ನಿಂದ ಸ್ಕ್ರೀನ್‌ನಲ್ಲಿ ತೋರಿಸಬೇಕಿತ್ತು. ಆ ವಿಡಿಯೊ ಫಿಲ್ಮ್ ತಯಾರಿಸಲು ನನಗೆ ತುಂಬಾ ಸಮಯ ಹಿಡಿಯಿತು. ತುಂಬಾ ಶ್ರಮ ವಹಿಸಬೇಕಾಯಿತು. ನನ್ನ ಶಾಲೆಯ ಐ.ಟಿ. ಟೆಕ್ನೀಶಿಯನ್‌ನ ಸಹಾಯವನ್ನೂ ಪಡೆಯಬೇಕಾಯಿತು. ಸರಿ, ಚಿತ್ರ ನಿರ್ಮಾಣವಾಯಿತು. ಇನ್ನಿತರ ವ್ಯವಸ್ಥೆಗಳೂ ಮುಗಿದಿದ್ದವು.

ಓಲಿವರ್ ತನ್ನಿಬ್ಬರು ಚಿಕ್ಕ ಮಕ್ಕಳೊಂದಿಗೆ (ಎರಡನೆಯ ಹೆಂಡತಿಯಲ್ಲಿ ಜನಿಸಿದ ಮಕ್ಕಳೊಂದಿಗೆ) ಹುಟ್ಟುಹಬ್ಬದ ಸಮಾರಂಭದಲ್ಲಿ ಸರಿಯಾದ ಸಮಯಕ್ಕೆ ಬಂದ. ಅವನ ಇಬ್ಬರು ಮಕ್ಕಳು ತುಂಬಾ ಮುಗ್ಧರಾಗಿದ್ದರು. ಅವರು ಆಶ್ಚರ್ಯದಿಂದ ಅತ್ತ ಇತ್ತ ನೋಡುತ್ತಿದ್ದರು. ಸಮಾರಂಭದಲ್ಲಿ ಭಾಷಣದ ಕಾರ್ಯಕ್ರಮ ಸಹ